**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂ:**90/2024**

ಸಿ.ಡಬ್ಲ್ಯೂ –1 ಪಿ.ಡಬ್ಲ್ಯೂ -1

| | | |
|---|---|---|
| ಹೆಸರು | ಃ | ದೇವೆಂದ್ರ |
| ತಂದೆ:ಗಂಡ | ಃ | ಗುರಣ್ಣ |
| ವಯಸ್ಸು | ಃ | 61 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | ಃ | ಗೋಳಾ(ಬಿ) |

ದಿನಾಂಕಃ30.08.2024

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದಃ**

ಆರೋಪಿ ಪರಿಚಯ ಇರುತ್ತದೆ. ಚಾಸಾ-8 ನನ್ನ ಮಗಳು, ಚಾಸಾ-2 ರಿಂದ 7 ರವರ ಪರಿಚಯ ಇರುತ್ತದೆ. ಮೋಹರಂ ಹಬ್ಬ ನೋಡಲು ಹೋದಾಗ ಆರೋಪಿಯು ಬಂದು ನನ್ನೊಂದಿಗೆ ಜಗಳ ತೆಗೆದಿರುತ್ತಾನೆ ನನ್ನನ್ನು ನೆಲಕ್ಕೆ ಕೆಡವಿ ಕಲ್ಲಿನಿಂದ ಹೊಡೆದು ಎಡಗೈ ಮೇಲೆ ಕಾಲು ಇಟ್ಟು ಕೈ ತಿರುಗಿಸಿರುತ್ತಾನೆ. ನಂತರ ನಾನು 10-11 ದಿನ ಮನೆಯಲ್ಲಿದ್ದು ನಂತರ ನನ್ನ ಮಗಳು ಚಾಸಾ-8 ರವರು ಬಂದು ಆಸ್ಪತ್ರೆಗ ಕರೆದುಕೊಂಡು ಹೋದರು. ಆಸ್ಪತ್ರೆಯಲ್ಲಿ ನನ್ನ ಕೈಗೆ ರಾಡ್ ಹಾಕಿದ್ದು ಭಾರವಾದ ವಸ್ತುಗಳನ್ನು ಎತ್ತಲು ಬರುವುದಿಲ್ಲ. ಆರೋಪಿ ನನಗೆ ಜೀವ ಬೆದರಿಕೆ ಹಾಕಿರುತ್ತಾರೆ. ಸಾಕ್ಷಿಗೆ ಈಗ ಒಂದು ಕಲ್ಲನ್ನು ತೋರಿಸಿ ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು ಮತ್ತು ಅದೇ ಕಲ್ಲಿನಿಂದ ನನಗೆ ಅರೋಪಿ ಹೊಡೆದಿರುತ್ತಾನೆ ಎಂದು ಹೇಳಿದ್ದರಿಂದ ಕಲ್ಲನ್ನು ಮು.ಮಾ.1 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ದಿ.29.07.2023 ರಂದು ಸಂಜೆ 7.30 ಗಂಟೆಗೆ ನಮ್ಮ ಗ್ರಾಮದ ಸುತಾಲಿ ಮಸಜೀದ ಎದುರಿಗೆ ಮೋಹರಂ ನೋಡಲು ಹೋಗಿದ್ದೆ ಎಂದರೆ ಸರಿ. ಅಲ್ಲಿ ಆರೋಪಿತನು ನನ್ನನ್ನು ನೋಡಿ ಹಳೆಯ ದ್ವೇಷದಿಂದ ಜಗಳ ತೆಗೆದು ಅವಾಚ್ಯವಾಗಿ ಬೋಸಡಿ ಮಗನೆ ಎಂದು ಬೈದು ಇವತ್ತು ನಿನಗೆ ಜೀವಸಹಿತ ಬಿಡುವುದಿಲ್ಲ ಎಂದು ಹೇಳಿರುತ್ತಾನೆ ಎಂದರೆ ಸರಿ. ಆರೋಪಿ ನನಗೆ ಕಲ್ಲಿನಿಂದ ಎಡಗೈ ಮೊಳಕೈ ಮೇಲೆ ಹೊಡೆದಿರುತ್ತಾನೆ ಎಂದರೆ ಸರಿ. ಆರೋಪಿ ನನ್ನ ಕೈ ಮೇಲೆ ಕಾಲಿಟ್ಟು ಕೈ ತಿರುಗಿದ್ದರಿಂದ ಎಲುಬು ಮುರಿದಿರುತ್ತದೆ ಎಂದರೆ ಸರಿ. ಅಲ್ಲೇ ಇದ್ದ ಚಾಸಾ-4 ರಿಂದ 6 ರವರು ಜಗಳ ಬಿಡಿಸಿರುತ್ತಾರೆ ಎಂದರೆ ಸರಿ. ಚಾಸಾ-8 ರವರು ನನಗೆ ನರೋಣಾ ಆಸ್ಪತ್ರೆಗೆ ದಾಖಲಿಸಿರುತ್ತಾರೆ ಎಂದರ ಸರಿ. ಅಲ್ಲಿಂದ ಹೆಚ್ಚಿನ ಚಿಕಿತ್ಸೆಗೆ ಸೋಲಾಪೂರದ ಕೊಠಾಡಿಯ ಆಸ್ಪತ್ರೆಗೆ ದಾಖಲಿಸಿರುತ್ತಾರೆ ಎಂದರೆ ಸರಿ. ಅಲ್ಲಿ ಚಿಕಿತ್ಸೆ ಪಡೆದು ಮನೆಗೆ ಬಂದು ವಿಚಾರ ಮಾಡಿ ತಡವಾಗಿ ದಿ.09.08.2023 ರಂದು ಪೋಲಿಸರಿಗೆ ಫಿರ್ಯಾದಿ ನೀಡಿರುತ್ತೇನೆ ಎಂದರೆ

ಸರಿ.

ಸಾಕ್ಷಿಗೆ ಈಗ ಅವರು ನೀಡಿದ ಫಿರ್ಯಾದಿಯನ್ನು ತೋರಿಸಿ ಅದನ್ನು ಗುರುತಿಸಿದ್ದು ಫಿರ್ಯಾದಿಯನ್ನು ನಿಪಿ-1 ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು ಆರೋಪಿ ಪರ ವಕೀಲರಿಂದ</u>**

ಆರೋಪಿ ಮನೆ ಮತ್ತು ನಮ್ಮ ಮನೆ ಒಂದಕ್ಕೊಂದು ಹತ್ತಿಕೊಂಡು ಇಲ್ಲ ಎಂದರೆ ಸರಿ. ನಮ್ಮ ಮನೆಯಿಂದ ಆರೋಪಿ ಮನೆ 8 ಮನೆಗಳ ನಂತರ ಬರುತ್ತದೆ. ನಮ್ಮ ಹೊಲ ಮತ್ತು ಆರೋಪಿ ಹೊಲ ಒಂದಕ್ಕೊಂದು ಹತ್ತಿಕೊಂಡು ಇಲ್ಲ ಎಂದರೆ ಸರಿ. ಆರೋಪಿಯೊಂದಿಗೆ ನನಗೆ ಯಾವುದೇ ವ್ಯವಹಾರ ಇಲ್ಲ ಎಂದರೆ ಸರಿ. ಘಟನೆಯಾದ 5-6 ದಿನಗಳ ನಂತರ ಸೋಲಾಪೂರದ ಕೊಠಾಡಿಯಾ ಆಸ್ಪತ್ರೆಗೆ ಹೋಗಿರುತ್ತೇನೆ. ಘಟನೆಯಾದ ಮರುದಿನ ನನ್ನ ಮಗಳು ಬಂದ ನಂತರ ನರೋಣಾದ ಆಸ್ಪತ್ರೆಗೆ ಹೋಗಿರುತ್ತೇನೆ. ನರೋಣಾ ಆಸ್ಪತ್ರೆಯವರು ಸೋಲಾಪುರದ ಅಸ್ಪತ್ರೆಗೆ ಹೋಗಲು ಯಾವುದೇ ದಾಖಲೆ ನೀಡಿರುವುದಿಲ್ಲ ಸಾಕ್ಷಿ ಮುಂದುವರೆದು ಸೋಲಾಪೂರದ ಆಸ್ಪತ್ರೆಗೆ ಹೋಗಬೇಕು ಎಂದು ಹೇಳಿದ ಕಾರಣ ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಕಲಬುರಗಿಯ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆ ಪಡೆಯಲು ಹೋಗಿರುವುದಿಲ್ಲ. ನನಗೆ ವೈದ್ಯರು ಗುಲಬರ್ಗಾಗೆ ಹೋಗಲು ತಿಳಿಸಿರುವುದಿಲ್ಲ. ನಾನು ಗುಲಬರ್ಗಾದಲ್ಲಿ ಚಿಕಿತ್ಸೆ ಪಡೆದಿರುವುದಿಲ್ಲ. ನರೋಣಾ ಆಸ್ಪತ್ರೆಗೆ ನಾನು ಮತ್ತು ನನ್ನ ಮಗಳು ಮಾತ್ರ ಹೋಗಿರುತ್ತೇವೆ. ನರೋಣಾದಲ್ಲಿ ಪೋಲಿಸ ಠಾಣೆ ಇರುತ್ತದೆ ಎಂದರ ಸರಿ ಸಾಕ್ಷಿ ಮುಂದುವರೆದು ಪೋಲಿಸರು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಆಗ ಪೋಲಿಸರಿಗೆ ದೂರು ನೀಡಿರುತ್ತೇನೆ. ನಾನು ಸೋಲಾಪೂರದ ಆಸ್ಪತ್ರೆಗೆ ಹೋಗಿ ಹುಷಾರಾಗಿ ಬಂದ ನಂತರ ಪೋಲಿಸ ಠಾಣೆಗೆ ಹೋಗಿ ದೂರು ನೀಡಿರುತ್ತೇನೆ. ಯಾವ ದಿನಾಂಕದಂದು ದೂರು ನೀಡಿರುತ್ತೇನೆ ಎಂದು ಹೇಳಲು ಬರುವುದಿಲ್ಲ. ನಾನು ನರೋಣಾಗೆ ಹೋಗಿ ಪೊಲಿಸರಿಗೆ ವಿಷಯ ತಿಳಿಸಿದಾಗ ಅವರು ಮೊದಲು ಅಸ್ಪತ್ರೆಗೆ ಹೋಗಿ ಎಂದು ಹೇಳಿದ ಕಾರಣ ಆಸ್ಪತ್ರೆಗೆ ಹೋಗಿರುತ್ತೇನೆ. ನಿಪಿ-1 ರಲ್ಲಿ ಎನು ನಮೂದು ಮಾಡಿದ್ದಾರೆ ಎಂದು ನನಗೆ ಗೊತ್ತಾಗುವುದಿಲ್ಲ ಎಂದರೆ ಸರಿ. ಸೋಲಾಪೂರದ ಅಸ್ಪತ್ರೆಯಲ್ಲಿ 15 ದಿನ ಇದ್ದೇನು. ಸೋಲಾಪೂರದ ಅಸ್ಪತ್ರಯಲ್ಲಿ ಯಾವ ದಿನಾಂಕಂದು ಸೇರಿಕೆಯಾಗಿ ಯಾವ ದಿನಾಂಕದಂದು ಬಿಡುಗಡೆ ಆಗಿ ಬಂದಿರುತ್ತೇನೆ ಎಂದು ಹೇಳಲು ಬರುವುದಿಲ್ಲ. ದೂರನ್ನು ನೀಡುವ ಮುಂಚೆ ಯಾರ ಜೊತೆಯೂ ಚರ್ಚೆ ಮಾಡಿರುವುದಿಲ್ಲ. ಮೋಹರಂ ಹಬ್ಬದಂದು ಸಾವಿರಾರು ಜನರು ಇದ್ದರು ಎಂದರೆ ಸರಿ. ಆರೋಪಿಯು ಕಲ್ಲಿನಿಂದ ಹೊಡೆದಾಗ ನನ್ನ ಕೈಗೆ ರಕ್ತ ಬಂದು ಅದು ಬಟ್ಟೆಗೆ ಹತ್ತಿತು. ಸದರಿ ಬಟ್ಟೆಯನ್ನು ಪೋಲಿಸರಿಗೆ ನೀಡಿರುವುದಿಲ್ಲ. ಘಟನೆ ನಡೆದ ಸಮಯದಲ್ಲಿ ಬಹಳ ಜನ ಇದ್ದರು ಅವರ ಹೆಸರು ಹೇಳಲು ಬರುವುದಿಲ್ಲ. ನನ್ನ ದೂರಿನಲ್ಲಿ ಕಲ್ಲಿನ ಅಳತೆ ಮತ್ತು ಬಣ್ಣದ ಬಗ್ಗೆ ನಮೂದು ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ದೂರನ್ನು ನನ್ನ ಮಗಳು ಬರೆದುಕೊಟ್ಟಿರುತ್ತಾಳೆ ಅವರಿಗೆ ವಿಷಯ ಗೊತ್ತು ಎಂದರೆ ಸರಿ. ನನಗೆ ನರೋಣಾ ಸರ್ಕಾರಿ ವೈದ್ಯರು ಜಿ.ಜಿ.ಎಚ್. ಕಲಬುರಗಿಗೆ ಹೋಗಲು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ-4, 5, 7 ರವರೊಂದಿಗೆ ವೈಶಮ್ಯ ಇರುವುದಿಲ್ಲ ಎಂದರೆ ಸರಿ. ನಾನು ಮೋಹರಂ ಜಾತ್ರೆಯಲ್ಲಿ ಸರಾಯಿ ಕುಡಿದು ಬಿದ್ದು ಕೈ ಮುರಿದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ನನಗೆ ಕಲ್ಲಿನಿಂದ ಹೊಡೆದಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರ ಸರಿಯಲ್ಲ. ಮು,ಮಾ.1 ತರಹದ ಕಲ್ಲುಗಳು ಸಾಮಾನ್ಯವಾಗಿ ಸಿಗುತ್ತವೆ ಎಂದರೆ ಸರಿ. ಆರೋಪಿ ಮತ್ತು ನನ್ನ ಮಧ್ಯ ಯಾವುದೇ ಸಾಲ ಇರುವುದಿಲ್ಲ ಎಂದರ ಸರಿ. ಸಾಕ್ಷಿ ಮುಂದುವರೆದು ಆರೋಪಿಯು ಕುಡಿದು ಬಂದು ಜಗಳ ಮಾಡುತ್ತಾನೆ ಎಂದು ನುಡಿಯುತ್ತಾರೆ. ಆರೋಪಿ ಸರಾಯಿ ಕುಡಿಯುವುದಿಲ್ಲ ಮತ್ತು ಜಗಳ ಮಾಡದೇ ಇದ್ದರೂ ಕುಡಿದು ಬಂದು ಜಗಳಮಾಡಿರುತ್ತಾನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ಘಟನೆ ನಡೆಯದಿದ್ದರೂ ಆರೋಪಿಯಿಂದ ಹಣ ವಸೂಲಿ ಮಾಡಬೇಕೆಂದು ಪೋಲಿಸರೊಂದಿಗೆ ಶಾಮೀಲಾಗಿ ಸುಳ್ಳು ದೂರು ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮೋಹರಂ ಹಬ್ಬ ನೋಡಲು ಹೋದಾಗ ಆರೋಪಿಯು ಬಂದು ನನ್ನೊಂದಿಗೆ ಜಗಳ ತೆಗೆದಿರುತ್ತಾನೆ ನನ್ನನ್ನು ನೆಲಕ್ಕೆ ಕೆಡವಿ ಕಲ್ಲಿನಿಂದ ಹೊಡೆದು ಎಡಗೈ ಮೇಲೆ ಕಾಲು ಇಟ್ಟು ಕೈ ತಿರುಗಿಸಿರುತ್ತಾನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ನಾನು 10-11 ದಿನ ಮನೆಯಲ್ಲಿದ್ದು ನಂತರ ನನ್ನ ಮಗಳು ಚಾಸಾ-8 ರವರು ಬಂದು ಆಸ್ಪತ್ರೆಗ ಕರೆದುಕೊಂಡು ಹೋದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆಸ್ಪತ್ರೆಯಲ್ಲಿ ನನ್ನ ಕೈಗೆ ರಾಡ್ ಹಾಕಿದ್ದು ಭಾರವಾದ ವಸ್ತುಗಳನ್ನು ಎತ್ತಲು ಬರುವುದಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನನಗೆ ಜೀವ ಬೆದರಿಕೆ ಹಾಕಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.